ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ Telephone 0831-2407201 0831-2407206 0831-2407213

ಫ್ಯಾಕ್ಸ/Fax 0831-2429662

e-mail ceozpbelgaum@yahoo.com

ನಂ.ಜಿಪ:ಅಭಿವೃದ್ಧಿ:13ನೇ ಹಣಕಾಸು:ವಿವ-122 :13-14. ದಿನಾಂಕ:15-6-2013.

## ಅಧಿಕೃತ ಜ್ಞಾಪನ

ವಿಷಯ: ಗ್ರಾಮ ಸಭೆಯ ನಡುವಳಿ ಆಧಾರದ ಮೇಲೆ 13ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆ ತಯಾರಿಸುವ ಕುರಿತು.

*****

ಸರಕಾರವು ತನ್ನ ಆದೇಶ ಸಂಖ್ಯೆ ಗ್ರಾಅಪ:60:ಗ್ರಾಪಸ:2012 ಬೆಂಗಳೂರು ದಿ:21-3-2013 ರಂತೆ 13ನೇ ಹನಕಾಸಿನ ಸಾಮಾನ್ಯ ಮೂಲದ ನಿರ್ವಹಣಾ ಅನುದಾನವನ್ನು ರೂ.11232849 ಗಳನ್ನು ಜಿ.ಪಂ.ಗೆ 22465699 ರೂ.ಗಳನ್ನು ತಾ.ಪಂಗೆ 78629946 ರೂ.ಗಳನ್ನು ಗ್ರಾ.ಪಂ.ಗೆ ಬಿಡುಗಡೆಗೊಳಿಸಿದೆ. ಸದರೀ ಸಮಸಂಖ್ಯೆಯ ಪತ್ರ ದಿ:15-3-2013ರ ಪ್ರಕಾರ 13ನೇ ಹಣಕಾಸು ಯೋಜನೆಯ ಸಾಮಾನ್ಯ ಮೂಲದ ಅನುದಾನದಲ್ಲಿ ರೂ. 17180022 ಗಳನ್ನು ಜಿ.ಪಂ.ಗೆ 34360043 ರೂ.ಗಳನ್ನು ತಾ.ಪಂ. ಗೆ 120260148 ರೂ.ಗಳನ್ನು ಗ್ರಾ.ಪಂ.ಗೆ ಬಿಡುಗಡೆಗೊಳಿಸಿ ಆದೇಶಿಸಿದೆ. ಆಯಾ ಚುನಾಯಿತ ಸ್ಥಳೀಯ ಸಂಸ್ಥೆಗಳು ನಿಗದಿಗೊಳಿಸಿರುವ ಅನುದಾನಕ್ಕೆ ಅನುಗುಣವಾಗಿ ಕ್ರಿಯಾಯೋಜನೆಯನ್ನು ತಯಾರಿಸಬೇಕಾಗಿದೆ.

ಈ ನಡುವೆ 13ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಸರಕಾರವು ತನ್ನ ಆದೇಶ ಸಂಖ್ಯೆ ಗ್ರಾಅಪ:21:ಗ್ರಾಪಸ:2013 ಬೆಂಗಳೂರು ದಿ:16-4-2013 ರ ಅನುಸಾರ ಆದೇಶವೊಂದನ್ನು ಹೊರಡಿಸಿ ಕೆಲವು ಮಾರ್ಗಸೂಚಿಗಳನ್ನು ನೀಡಿದೆ. ಈ ಮಾರ್ಗಸೂಚಿಯಲ್ಲಿ ಈ ಕೆಳಕಂಡ ಅಂಶಗಳು ಬಹಳ ಮುಖ್ಯವಾದವುಗಳಾಗಿವೆ.

1) 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಬಿಡುಗಡೆಯಾಗುವ ಕನಿಷ್ಠ 90% ರಷ್ಟು ಅನುದಾನವನ್ನು ದೀರ್ಘಕಾಲ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಕಾಯ್ದಿರಿಸುವದು. ಶೇ 10% ರಷ್ಟನ್ನು ಮೀರದಂತೆ ಇತರ ಅಭಿವೃದ್ಧಿ ಯೋಜನೆಗಳಿಗೆ ಕಾಯ್ದಿರಿಸುವದು. ( ಎಲ್ಲಾ ಖರೀದಿ ಪ್ರಕ್ರೀಯೆಗಳನ್ನು ಪ್ರತಿಬಂದಿಸಲಾಗಿದೆ)
2) ಯೋಜನೆಗಳಿಗೆ ಅವಶ್ಯಕತೆ ಇರುವ ಪೂರ್ಣ ಅನುದಾನವನ್ನು ಕಾಯ್ದಿರಿಸುವದು. ಪ:ಜಾ ಪ:ವ ಕಲ್ಯಾಣಕ್ಕಾಗಿ ಶೇ 25 %ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸುವದು.
3) ವಿಕಲ ಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ 3%ರಷ್ಟನ್ನು ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವದು.
4) ಪಂಚಾಯತ ರಾಜ್ ಅಧಿಸೂಚನೆ ನಿಯಮ 1993ರರ ಪ್ರಕರಣ 3ಎ ಪ್ರಕಾರ ಮಾರ್ಡಸಭೆ ಮತ್ತು ಗ್ರಾಮಸಭೆಗಳಿಂದ ಪಡೆದ ಶಿಫಾರಸ್ಸುಗಳನ್ನು ಆದ್ಯತಾ ಅನುಸಾರ ಆದರಿಸಿ ಆಯಾ ಚುನಾಯಿತ ಸ್ಥಳೀಯ ಸಂಸ್ಥೆಗಳು ಕ್ರಿಯಾ ಯೋಜನೆಯನ್ನು ತಯಾರಿಸಬೇಕು ಎಂಬವುಗಳು.

ಈ ಎಲ್ಲ ಅಂಶಗಳು ಗಮನಿಸಿದಾಗ 13ನೇ ಹಣಕಾಸು ಕಾರ್ಯಕ್ರಮದ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳ್ಳುವ 3ಹಂತದ ಪಂಚಾಯತ ರಾಜ್ ಸಂಸ್ಥೆಗಳು ತಯಾರಿಸುವ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳು ಗ್ರಾಮ ಸಭೆಯಿಂದ ಶಿಫಾರಸ್ಸು ಮಾಡಲ್ಪಟ್ಟ ಕಾಮಗಾರಿಗಳಾಗಿರಬೇಕು ಎಂಬುದು ಸ್ಪಸ್ಟವಾಗುತ್ತದೆ.

---2

ಆದ್ದರಿಂದ ಆಯಾ ಭಾಗದ ಜಿಲ್ಲಾ ಪಂಚಾಯತ ಸದಸ್ಯರು/ತಾಲೂಕಾ ಪಂಚಾಯತ ಸದಸ್ಯರು/ಗ್ರಾಮ ಪಂಚಾಯತ ಸದಸ್ಯರನ್ನು ಒಳಗೊಂಡಂತೆ ಗ್ರಾಮ ಸಭೆಗಳನ್ನು ನಡೆಸಿ, 13ನೇ ಹಣಕಾಸು ಯೋಜನೆಯ ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಪಟ್ಟಿ ಮಾಡಲು ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ತಿಳಿಸಿದೆ.

ಹೀಗೆ ಗ್ರಾಮ ಸಭೆಯಲ್ಲಿ ಪಟ್ಟಿ ಮಾಡಲ್ಪಟ್ಟ ಕಾಮಗಾರಿಗಳಲ್ಲಿ ಆಯ್ಕೆ ಮಾಡಿಕೊಂಡು ಗ್ರಾಮ ಪಂಚಾಯತ/ತಾಲೂಕ ಪಂಚಾಯತ ಮತ್ತು ಜಿಲ್ಲಾ ಪಂಚಾಯತ್‌ಗಳು ಕ್ರಿಯಾ ಯೋಜನೆಯನ್ನು ಹಿಂದಿನಂತೆಯೇ ತಯಾರಿಸಿ ಆಯಾ ಜಿಪಂ/ತಾಪಂ/ಗ್ರಾ.ಪಂ ಸಭೆಗಳಲ್ಲಿ ಅನುಮೋದನೆ ಮಾಡಬೇಕಾಗಿದೆ.

ಅಂತೆಯೇ ಸರಕಾರವು ತನ್ನ ಆದೇಶ ಸಂ.ಗ್ರಾಅಪ:75:ಜಿಪಸ:2013 ಬೆಂಗಳೂರು ದಿ:6-5-2013ರ ಅನುಸಾರ ಆದೇಶವೊಂದನ್ನು ಹೊರಡಿಸಿ ಜಿಲ್ಲಾ ಪಂಚಾಯತಗಳಿಗೆ ನೀಡುವ 2.00 ಕೋಟಿ ರೂ.ಗಳ ವಾರ್ಷಿಕ ಅನುದಾನವನ್ನು ವಿನಿಯೋಗಿಸಲು ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಮಾರ್ಗಸೂಚಿಯಲ್ಲಿಯ ಮುಖ್ಯಾಂಶಗಳು ಮೇಲೆ ಉಲ್ಲೇಖಿಸಿರುವ 13ನೇ ಹಣಕಾಸು ಯೋಜನೆಯ ಮಾರ್ಗಸೂಚಿಯಲ್ಲಿರುವ ಮುಖ್ಯಾಂಶಗಳು ಆಗಿರುತ್ತವೆ. ಈ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳ್ಳುವ ಕಾಮಗಾರಿಗಳು ಸಹ ಗ್ರಾಮ ಸಭೆಯಿಂದ ಶಿಫಾರಸ್ಸು ಮಾಡಲ್ಪಟ್ಟ ಕಾಮಗಾರಿಗಳಾಗಿರಬೇಕಾಗುತ್ತದೆ.

ಆದ್ದರಿಂದ ಜಿಲ್ಲಾ ಪಂಚಾಯತ ಸದಸ್ಯರನ್ನು ಗ್ರಾಮ ಸಭೆಗಳಿಗೆ ಕಡ್ಡಾಯವಾಗಿ ಲಿಖಿತವಾಗಿ ಆಹ್ವಾನಿಸಲು ಮತ್ತು ಅವರ ಸಮ್ಮುಖದಲ್ಲಿ ಜನರು ಸೂಚಿಸುವ ಕಾಮಗಾರಿಗಳನ್ನು ಪಟ್ಟಿಮಾಡಲು ಕ್ರಮ ಕೈಕೊಳ್ಳಲು ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದೆ.

ಸ್ಥಳ ಪ್ರತಿಗೆ ಮು.ಕಾ.ನಿ.ಅ.ಜಿ.ಪಂ.ಬೆಳಗಾವಿ
ಅವರಿಂದ ರುಜು ಆಗಿದೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ ಇವರ ಪರವಾಗಿ

ಪ್ರತಿಯನ್ನು : ಶ್ರೀ. ಮಂಜುನಾಥ. ತೋಟದ, ಪ್ರೋಜೆಕ್ಟ ಇಂಜಿನಿಯರ್, NRDMS, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ.

2/- ಸದರಿ ಅಧಿಕೃತ ಜ್ಞಾಪನ ಪತ್ರದಲ್ಲಿ ವಿವರಿಸಿರುವ ಅಂಶಗಳನ್ನು ಜಿಲ್ಲಾ ಪಂಚಾಯತ ವೆಬ್ ಸೈಟ್‌ನಲ್ಲಿ ಅಳವಡಿಸಲು ಅಗತ್ಯಕ್ರಮ ಕೈಕೊಳ್ಳಲು ಸೂಚಿಸಿದೆ.

ಪ್ರತಿಯನ್ನು: ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

2/- ತಾಲೂಕಾ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗೆ ಈ ಪತ್ರದ ಜೊತೆಗೆ ಲಗತ್ತಿಸಿರುವ ಅಧಿಕೃತ ಜ್ಞಾಪನ ಪತ್ರವನ್ನು ಪೂರೈಸಿ, ಸದರಿ ವಿಷಯವನ್ನು ಅನುಷ್ಠಾನ ತರುವಲ್ಲಿ ಕೂಡಲೇ ಸೂಕ್ತ ನಿರ್ದೇಶನ ನೀಡಿ, ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಲು ತಿಳಿಸಲಾಗಿದೆ.